ಅಧ್ಯಕ್ಷರು.— ಕ್ಲಾರಿಫಿಕೇಷನ್‌ಗೆ ಅವಕಾಶ ಇಲ್ಲ. ತಾವು ಕುಳಿತುಕೊಳ್ಳಿ.

೬) ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ನಿರ್ಮಾಣ ಮಾಡಲು ಒತ್ತಾಯ

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ರೋಣ ತಾಲ್ಲೂಕು ವಿದ್ಯುತ್ ಪರಿಸ್ಥಿತಿಯು ಸುಧಾರಿಸಬೇಕಾದರೆ, ನರೇಗಲ್ಲದಲ್ಲಿ ೧೧೦ ಕೆ. ವಿ. ಸ್ಟೇಷನ್ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯಕ ಇದ್ದು, ಈಗಾಗಲೇ ಸಂಬಂಧಪಟ್ಟಂತೆ, ಭೂಸ್ವಾಧೀನ ಕೆಲಸವೂ ಮುಗಿದಿದ್ದು ಉಪಕರಣಗಳೂ ಲಭ್ಯ ಇರುವುವು, ಗದಗದಿಂದ ನರೇಗಲ್ಲದವರೆಗೆ ೧೧೦ ಕೆ. ವಿ. ಲೈನ್ ಎಳೆಯುಬೇಕು. ನರೇಗಲ್ಲ–ಗಜೇಂದ್ರಗಡಕ್ಕೆ ಲೈನನ್ನು ಎಳೆಯುತ್ತಿದ್ದು, ಗಜೇಂದ್ರಗಡದಲ್ಲಿ ೩೩ ಕೆ ವಿ. ಸ್ಟೇಷನ್ ನಿರ್ಮಾಣ ಕೆಲಸವೂ ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ಅಂದರೆ ವಿದ್ಯುತ್ ಪರಿಸ್ಥಿತಿ ಸುಧಾರಿಸುವುದು. ಈ ಬಗ್ಗೆ ತೀವ್ರ ಕ್ರಮ ಅವಶ್ಯ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ನರೇಗಲ್ಲಿನಲ್ಲಿ ೧೧೦/೧೧ ಕೆ. ವಿ. ೧೦ ಎಂ. ವಿ. ಎ. ಸಾಮರ್ಥ್ಯದ ಮಂತ್ರು ೧೧೦/೩೩, ೧೦ ಎಂ. ವಿ.ಎ. ಸಾಮರ್ಥ್ಯದ ಸ್ಟೇಷನ್ ಅನ್ನು ಸ್ಥಾಪಿಸಲಾಗ ತ್ತಿದೆ. ಅದಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್‌ಗೆ ಕ್ರಯಾದೇಶ ನೀಡಲಾಗಿದ್ದು, ಇದು ಸೆಪ್ಟೆಂಬರ್ ೮೮ ರಲ್ಲಿ ಸರಬರಾಜಾಗುವ ನಿರೀಕ್ಷೆ ಇದೆ. ಈ ಸ್ಟೇಷನ್ನಿನ ಪೂರ್ವಭಾವಿ ಕೆಲಸಗಳನ್ನು ಮುಂದಿನ ತಿಂಗಳು ಕೈಗೆತಿಗೊಳ್ಳಲಾಗುತ್ತದೆ. ಈ ಕೆಲಸಕ್ಕೆ ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಅಳವಡಿಸಲಾಗಿದ್ದು, ಕೆಲಸವನ್ನು ಈ ಸಾಲಿನಲ್ಲಿ ಮಾಡಿ ಮುಗಿಸುವ ಕಾರ್ಯಕ್ರಮವಿದೆ.

ಗದಗದಿಂದ ನರೇಗಲ್ಲಿಗೆ ಸುಮಾರು ೨೮ ಕಿ. ಮೀ ಉದ್ದದ ೧೧೦ ಕೆ. ವಿ. ಲೈನ್ ಎಳೆಯಬೇಕಾಗಿದೆ ಇದರ ಸರ್ವೆ ಕೆಲಸ ಮುಗಿದಿದೆ. ಈ ಲೈನಿಗೆ ಟವರ್‌ಗಳನ್ನು ಸರಬರಾಜು ಮಾಡಲಾಗಿದೆ. ಲೈನಿನ ಕೆಲಸವನ್ನು ಕೂಲಿ ಗುತ್ತಿಗೆ ಮೇಲೆ ಇತ್ತೀಚೆಗೆ ಆಶೀರ್ವಾದ ಎಲೆಕ್ಟ್ರಿಕಲ್ಸ್‌ನವರಿಗೆ ನೀಡಲಾಗಿದೆ. ಲೈನು ಕೆಲಸವನ್ನು ಶೀಘ್ರದಲ್ಲೇ ಕೈಗೆತ್ತಿಗೆಗೊಳ್ಳಲಾಗುತ್ತದೆ. ಈ ಕೆಲಸವನ್ನು ಈ ಸಾಲಿನಲ್ಲಿ ಮಾಡಿ ಮುಗಿಸುವ ಕಾರ್ಯಕ್ರಮವಿದ್ದು ಇದಕ್ಕೆ ಈ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆ.

ಗಜೇಂದ್ರಗಡದಲ್ಲಿ ಒಂದು ೩೩/೧೧ ಕೆ ವಿ. ಗೆ ಎಂ. ವಿ. ಎ. ಸಾಮರ್ಥ್ಯದ ಸ್ಟೇಷನ್ ಅನ್ನು ಸ್ಥಾಪಿಸಲಾಗುತ್ತದೆ. ಸ್ಟೇಷನ್ನಿಗೆ ಬೇಕಾಗುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಸ್ಟೇಷನಿಗೆ ಬೇಕಾಗುವ ಕೆಲವು ಸಾಮಾಗ್ರಿ, ಪ್ಲಾಂಟಿನ ಉಪಕರಣಗಳಿಗೆ ಕ್ರಯಾದೇಶ ನೀಡಲಾಗಿದೆ. ಸ್ಟೇಷನ್ನಿನ ಸ್ಥಳದಲ್ಲಿ ನೆಲ ಸಮ ಮಾಡುವ ಇತ್ಯಾದಿ ಪೂರ್ವಭಾವಿ ಕೆಲಸಗಳು ಪ್ರಾರಂಭವಾಗಿವೆ. ಈ ಕೆಲಸವನ್ನು ಈ ಸಾಲಿನಲ್ಲಿ ಮುಗಿಸುವ ಕಾರ್ಯಕ್ರಮವಿದ್ದು, ಇದಕ್ಕೆ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆ.

ನರೇಗಲ್ಲಿನಿಂದ ಗಜೇಂದ್ರಗಡಕ್ಕೆ ಬರುವ ಸುಮಾರು ೨೫ ಕಿ. ಮೀ. ಉದ್ದದ ೩೩ ಕೆ. ವಿ. ಲೈನಿನ ಕೆಲಸವನ್ನು ಈ ವರ್ಷವೇ ಪೂರ್ಣಗೊಳಿಸಲು ಕಾರ್ಯಕ್ರಮವಿದೆ.

೭ ಹಿರಿಯೂರು ತಾಲ್ಲೂಕಿನ ಕೊಡ್ಲಿಹಳ್ಳಿ ಗ್ರಾಮದ ಬಳಿ ವೇದಾವತಿ ಸುವರ್ಣಮುಖಿ ನದಿಗಳ ಸಂಗಮದಲ್ಲಿ ಸೇತುವೆ ನಿರ್ಮಿಸುವುದು,

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕಿನ ಕೊಡ್ಲಹಳ್ಳಿ ಗ್ರಾಮದ ಬಳಿ ಎರಡು ನದಿಗಳಾದ ವೇದಾವತಿ ಪುತ್ತು ಸುವರ್ಣಮುಖಿ ನದಿಗಳ ಸಂಗಮವಾಗುತ್ತದೆ. ಪ್ರತಿ ವರ್ಷವು ಶ್ರಾವಣಮಾಸದಲ್ಲಿ ' ಶ್ರೀ ಕೊಡ್ಲಿ ಸಂಗಮೇಶ್ವರ ' ಉತ್ಸವ ರಾಜ್ಯದ ಎಲ್ಲಾ ಭಾಗಗಳಿಂದಲೂ ಜನರನ್ನು ಆಕರ್ಷಿಸುವ ಅತಿ ಪುರಾತನವಾದ ಜಾತ್ರೆ, ಇಲ್ಲಿ ದನಗಳ ಜಾತ್ರೆಯು ಜನಪ್ರಿಯವಾದ ಆಗತ್ಯವಿದೆ. ಆದರೆ ಈ ಉತ್ಸವವು ಜರುಗುವ ಸಂದರ್ಭ ಮಳೆಗಾಲವಾದ್ದರಿಂದ ಎರಡು ನದಿಗಳು ಉಕ್ಕಿ ಹರಿಯುವ ದೃಶ್ಯ ಕಣ್ಣನ ಸೆಳೆಯುತ್ತದೆ. ಈ ಉತ್ಸವಕ್ಕೆ ಭಾಗವಹಿಸಿದ ಜನ ದೇವಸ್ಥಾನದ